ಇಲ್ಲ.

ಈ) ಹಾಗಿದ್ದಲ್ಲಿ ತಾಲ್ಲೂಕಿನಲ್ಲಿ ಇಂತಹ ಎಷ್ಟು ಪ್ರಕರಣಗಳು ಬಾಕಿ ಇವೆ, ಕಾಪು ಕ್ಷೇತ್ರದಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು?

ಉಡುಪಿ ತಾಲ್ಲೂಕಿನಲ್ಲಿ 43801 ಪ್ರಕರಣಗಳು ಬಾಕಿ ಇವೆ, ಕಾಪು ಕ್ಷೇತ್ರದಲ್ಲಿ 2350 ಪ್ರಕರಣಗಳು ಬಾಕಿ ಇವೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(260)155**
2. ಸದಸ್ಯರ ಹೆಸರು	:	**ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)**
3. ವಿಷಯ	:	**ಕಾಪು ತಾಲ್ಲೂಕು ಕೇಂದ್ರವಾಗಿ ಪರಿವರ್ತನೆಗೊಳಿಸುವುದು.**
4. ಉತ್ತರಿಸುವ ಸಚಿವರು	:	**ಕಂದಾಯ ಸಚಿವರು (ಶ್ರೀ ಕರುಣಾಕರ ರೆಡ್ಡಿ)**

(ಅ) ಕಾಪು ವಿಧಾನ ಸಭಾ ಕ್ಷೇತ್ರದ ಪುನರ್ ವಿಂಗಡನಾ ಪ್ರದೇಶವನ್ನು ಕಾಪು ತಾಲ್ಲೂಕನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಲಾಗಿದ್ದು, ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಕಾಪುವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ ಮನವಿಗಳು ಬಂದಲ್ಲಿ ಪರಿಶೀಲಿಸಲಾಗುವುದು.

(ಆ) ಗ್ರಾಮ ಪಂಚಾಯತ್‌ಗಳಲ್ಲಿ ದೊಡ್ಡ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತ್‌ಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಕಾರ್ಯ ಯೋಜನೆಯಲ್ಲಿದೆಯೇ?

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 349ರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ನಗರಾಭಿವೃದ್ಧಿ ಇಲಾಖೆಗೆ ಬಂದಂತಹ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಲಾಗುತ್ತದೆ.

(ಇ) ಹಾಗಿದ್ದಲ್ಲಿ, ಕಾಪು ವಿಧಾನ ಸಭಾ ಕ್ಷೇತ್ರದ ದೊಡ್ಡ ಪಂಚಾಯತ್‌ಗಳಾದ ಶಿರ್ವ, ಪಡುಬಿದ್ರಿ ಗ್ರಾಮ ಪಂಚಾಯತ್‌ನ್ನು ಪಟ್ಟಣ ಪಂಚಾಯತ್‌ನ್ನಾಗಿ ಪರಿವರ್ತನೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಬಂದಿರುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (257)156

2. ಸದಸ್ಯರ ಹೆಸರು : ಶ್ರೀ ಹೆಚ್.ಪಿ.ಮಂಜುನಾಥ್

(ಶ್ರೀ ಬಸವರಾಜ್ ಬೊಮ್ಮಾಯಿ)

ಅ ಹುಣಸೂರು ತಾಲ್ಲೂಕಿನ ಹಾರಂಗಿ ಬಲದಂಡೆ ನಾಲಾ ವ್ಯಾಪ್ತಿಯಲ್ಲಿ ನಾಲೆ ಸರ್ವೀಸ್ ರಸ್ತೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ರಾಷ್ಟ್ರಪತಿ ಆಳ್ವಿಕೆಯ ಕಾಲದಲ್ಲಿ ವಿವಿಧ ಹಂತಗಳಲ್ಲಿ ಮಂಜೂರು ಆದ ಅನುದಾನವೆಷ್ಟು (ಪ್ರತ್ಯೇಕವಾಗಿ ನೀಡುವುದು).

2007–08ನೇ ಸಾಲಿನಲ್ಲಿ ಹುಣಸೂರು ತಾಲ್ಲೂಕಿನ ಹಾರಂಗಿ ಬಲದಂಡೆ ನಾಲೆ. ಸರ್ವೀಸ್ ರಸ್ತೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 14.71 ಕೋಟಿ ಅನುದಾನವನ್ನು, 2008–09ನೇ ಸಾಲಿಗೆ ಹುಣಸೂರು ತಾಲ್ಲೂಕಿನ ಹಾರಂಗಿ ಬಲದಂಡೆ ನಾಲೆ, ಸರ್ವೀಸ್ ರಸ್ತೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 3.66 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಅನುದಾನದಡಿಯಲ್ಲಿ ರಾಷ್ಟ್ರಪತಿ ಆಳ್ವಿಕೆಯ ಕಾಲದಲ್ಲಿ ಅಂದರೆ, ನವೆಂಬರ್ – 2007 ರಿಂದ ಮೇ – 2008 ರವರೆಗೆ 306 ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅವುಗಳಿಗೆ ರೂ.6.645 ಕೋಟಿ ವೆಚ್ಚ ಮಾಡಲಾಗಿರುತ್ತದೆ (ಅನುಬಂಧ–ಅ ನಲ್ಲಿ ವಿವರ ಲಗತ್ತಿಸಿದೆ).

ಆ ಬಿಡುಗಡೆಯಾದ ಅನುದಾನದಿಂದ ಕೈಗೊಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ ಹಾಗೂ ಈ ಕಾಮಗಾರಿಗಳನ್ನು ಟೆಂಡರು ಪ್ರಕ್ರಿಯೆ ಮುಖಾಂತರ ಕೈಗೊಳ್ಳಲಾಗಿದೆಯೇ.

ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಅನುಮೋದಿತ ಕಾಮಗಾರಿ ಪಟ್ಟಿಯಲ್ಲಿ ಸೇರಿರುತ್ತವೆ. ಹಾಗೂ ಇವುಗಳನ್ನು ಟೆಂಡರ್ ಮುಖಾಂತರ ಕೈಗೆತ್ತಿಕೊಳ್ಳಲಾಗಿದೆ.

ಇ ಹಾಗಿದ್ದಲ್ಲಿ ಅನುಮೋದನೆ ನೀಡಿದ ಆದೇಶ ವಿವರ (ಆದೇಶ ಸಂಖ್ಯೆ:ಕಾಮಗಾರಿಗಳ ವಿವರದ ಪಟ್ಟಿ ಮತ್ತು ಅಂದಾಜು ವೆಚ್ಚ) ಮತ್ತು ಟೆಂಡರ್ ಪ್ರಕ್ರಿಯೆ ವಿವರ? (ಪ್ರಕಟಣೆ ಸಂಖ್ಯೆ) ಮತ್ತು ದಿನಾಂಕ ಕಾಮಗಾರಿವಾರು ಅಂದಾಜು ವೆಚ್ಚಗಳನ್ನು ನೀಡುವುದು.